ಎಮ್.ವಿ.ಸಿ. ನಂಃ 424/2023
ಪಿ.ಡಬ್ಲ್ಯೂಃ 2,

**ದಿನಾಂಕ : 23-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ. ಎ.ಎಮ್.ವಾಯ. ಎದುರುದಾರ ಪರ ವಕೀಲರಿಂದ :**

ನಾನು 10 ನೇ ತರಗತಿ ತನಕ ಕನ್ನಡ ಮಾಧ್ಯಮದಲ್ಲಿ ಓದಿರುತ್ತೇನೆ. ನನ್ನ ಮೋಟಾರ ಸೈಕಲ ನಂಬರ ಕೆ.ಎ.56-ಕೆ-3904. ಸದರಿ ಮೋಟಾರ ಸೈಕಲ ನನ್ನ ಹೆಸರಿನಲ್ಲಿದೆ. ಸದರಿ ವಾಹನವು 2 ಜನರ ಕುಳಿತುಕೊಳ್ಳುವ ಸಾಮರ್ಥ್ಯ ಹೊಂದಿರುತ್ತದೆ. ವಿಶಾಲ ನನ್ನ ಸಂಬಂಧಿಕ ಮತ್ತು ನೀಲಕಂಠ ಪರಿಚಯ ಇರುತ್ತದೆ.ಮೋಟಾರ ಸೈಕಲನ್ನು ನಾನೇ ನಡೆಸುತ್ತಿದ್ದೆ ಕಲ್ಲಕೋರಾ ದಿಂದ ಕಮಲಾಪುರಕ್ಕೆ ಹೊರಟಿದ್ದೆ. ಕಲ್ಲಕೋರಾ ದಿಂದ ಕಮಲಾಪುರಕ್ಕೆ ಇಬ್ಬರು ಹೋಗಿದ್ದೇವು, ಭಗವಾನ ತಾಂಡಾದ ಹತ್ತಿರ ನೀಲಕಂಠ ಸಿಕ್ಕರು ಅವರನ್ನು ಕುಳಿಸಿಕೊಳ್ಳಬೇಕು ಎಂದು ಬೈಕನ್ನು ಸೈಡಗೆ ಹಾಕಿರುತ್ತೇವೆ, ಆಗ ನೀಲಕಂಠ ಇವರು ಬೈಕ ಮೇಲೆ ಕುಳಿತುಕೊಳ್ಳುವ ಸಮಯದಲ್ಲಿ ಮೊತ್ತೊಂದು ಬೈಕ ನಮ್ಮ ಬೈಕಗೆ ಬಂದು ಡಿಕ್ಕಿ ಪಡಿಸಿತ್ತು. ಸತೀಶ ತಂದೆ ಹಣಮಂತ ಗದ್ಲೇಗಾಂವ ಪರಿಚಯ, ಅವರು ನನ್ನ ಸಹೋದರರು. ದೂರುನ್ನು ನನ್ನ ಸತೀಶ ನೀಡಿರುತ್ತಾರೆ. ದೂರುನ್ನು ನಾನು ಓದಿ ತಿಳಿದುಕೊಂಡಿಲ್ಲಾ. ಸತೀಶ ಗದ್ಲೇಗಾಂವ ನಮ್ಮ ಹಿಂದಿನಿಂದ ಬರುತ್ತಿದ್ದರು. ಅವರು ಹಿಂದೆ ಇದ್ದರು, ಪೋಲಿಸರು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಸತೀಶ ದೂರು ನೀಡಿದ ನಂತರ ನಾನು ಓದಿ ತಿಳಿದುಕೊಂಡಿಲ್ಲಾ. ನಿಪಿ-2 ರಲ್ಲಿ ಸತೀಶ ಇವರು ನಾವು ಮೋಟಾರ ಸೈಕಲ ಮೇಲೆ ಹೊರಟಿದ್ದೇವು ಎಂದು ದೂರು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ನಾವು ಸ್ಥಳದಲ್ಲಿ ನಿಂತಿದ್ದೇವು ಎಂದು ನುಡಿಯುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದನೆ.

**ಎಮ್.ವಿ.ಸಿ. ನಂಃ 424/2023**
**ಪಿ.ಡಬ್ಲ್ಯೂಃ 2,**

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾವು ಮೂರು ಜನ ಮೋಟಾರ ಸೈಕಲ ಮೇಲೆ ಹೊರಟಿದ್ದೇವು ಎಂದು ಬರೆಸಲಾಗಿದೆ ಎಂದರೆ ನನಗೆ ಗೊತ್ತಿಲ್ಲಾ. ನನ್ನ ಚಾಲನಾ ಪತ್ರ ಮತ್ತು ವಿಮೆ ಇದೆ. ನನ್ನ ಮೊಬೈಲನಲ್ಲಿರುತ್ತದೆ. ನನ್ನ ಬಳಿ ಚಾಲನಾ ಪತ್ರ ಇದೆ ಬೇಕಾದರೆ ಹಾಜರು ಪಡಿಸುತ್ತೇನೆ. ಸತೀಶ ಬರುತ್ತಿದ ಮೋಟಾರ ಸೈಕಲ ನಂಬರ ನನೆಪಿಲ್ಲಾ. ನಮಗೆ ಡಿಕ್ಕಿ ಪಡಸಿದ ಗಾಡಿ ನಂಬರ ಕೆ.ಎ-32-ಎಚ್.ಎ.-7075. ಮೊದಲು ಗೌಂಡಿ ಕೆಲಸ ಮಾಡುತ್ತಿದ್ದೆ. ದಿನಕ್ಕೆ ರೂ.600 ರಿಂದ 700 ಸಂಪಾದಿಸುತ್ತಿದ್ದೆ, ನಿಖರವಾಗಿ ಕೆಲಸ ಇರುತ್ತಿರಲಿಲ್ಲಾ, ದಿನಗೂಲಿ ಆಗಿ ಕೆಲಸಕ್ಕೆ ಹೋಗುತ್ತಿದ್ದೆ. ನನ್ನ ವಯಸ್ಸು 26 ಇದೆ. 10 ನೇ ತರಗತಿಯ ಶಾಲಾ ದಾಖಲಾತಿಗಳು ಸಲ್ಲಿಸಿಲ್ಲಾ. ನನಗೆ 26 ವಯಸ್ಸು ಇದೆ ಎಂದು ದಾಖಲೆ ಸಲ್ಲಿಸಿಲ್ಲಾ. ಈಗ ಮೊದಲಿನಂತೆ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ನೀಲಕಂಠ ಮತ್ತು ವಿಶಾಲ ಇವರು ತಮ್ಮ ತಮ್ಮ ವ್ಯವಹಾರ ಮಾಡುತ್ತಾ ಹೋಗುತ್ತಿದ್ದಾರೆ. ರಸ್ತೆಯ ಅಗಲ ಗೊತ್ತಿಲ್ಲಾ, ಸದರಿ ರಸ್ತೆ ಡಾಂಬರ ರಸ್ತೆ ಇರುತ್ತದೆ. ನಾನು ಪರಿಹಾರ ಪಡೆಯಲು ಕೆ.ಎ.-32-ಎಚ್-ಎ-7075 ವಾಹನದ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಮೂರು ಜನರು ಮೋಟಾರ ಸೈಕಲ ಮೇಲೆ ಹೊರಟಿದ್ದೇವು, ನಮ್ಮ ತಪ್ಪಿನಿಂದ ಬಿದ್ದು ಪರಿಹಾರಗೋಸ್ಕರ ನಾನು ಪರಿಹಾರ ಪಡೆಯಲು ಕೆ.ಎ.-32-ಎಚ್-ಎ-7075 ವಾಹನದ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರಕ್ಕೆ ಯಾವುದೇ ಆಧಾರ ಇಲ್ಲಾ ಎಂದರೆ ಸರಿಯಲ್ಲ.

**ಎಮ್.ವಿ.ಸಿ. ನಂಃ 424/2023**
**ಪಿ.ಡಬ್ಲ್ಯೂಃ 2,**

ನಾನು ಈಗಲೂ ಸಹ ಕೆಲಸ ಮಾಡಿಕೊಂಡು ಆರೋಗ್ಯವಾಗಿದ್ದರು ಇದ್ದರೂ ಸಹ ಇಲ್ಲಾ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪರಿಹಾರ ಸಂಬಂಧ ನಾನು ಸುಳ್ಳು ಪ್ರಕರಣವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**